ಸಾಕ್ಷಿಯನ್ನು ದಿಃ22-07-2025 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ. ಎಸ್ ಎಮ್ ಹೆಚ್ ವಕೀಲರಿಂದ (ಪ್ರತಿವಾದಿಯರ ಪರವಾಗಿ)**

ದಾವಾ ಆಸ್ತಿಯಲ್ಲಿ ಪ್ರತಿವಾದಿ ಮತ್ತು ಪ್ರತಿವಾದಿಯ ಗಂಡ ಸೇರಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಕರಾರು ಪತ್ರ ಬರೆಯುವ ದಿನ ಪ್ರತಿವಾದಿಯ ಮಗನ ಸಹಿ ಏಕೆ ಪಡೆಯಲಿಲ್ಲ ಎಂದರೆ ಆ ದಿನ ಆತ ಇರಲಿಲ್ಲ ಎಂದು ಹೇಳುತ್ತಾರೆ. ಆ ದಿನ ಪ್ರತಿವಾದಿ ಒಬ್ಬರೇ ಇದ್ದರು. ಕರಾರು ಪತ್ರ ಬರೆಯುವ ಒಂದು ದಿನ ಮೊದಲು ಮಾತುಕತೆಯಾಗಿದೆ. ಕರಾರು ಪತ್ರ ಬರೆದ ದಿನಾಂಕ ನೆನಪಿಲ್ಲ. ಪ್ರತಿವಾದಿ ನಮ್ಮ ಸಂಬಂಧಿ ಹಾಗೂ ಪರಿಚಯಸ್ಥರು ಎಂದರೆ ಸಂಬಂಧಿಯಲ್ಲ ಕೇವಲ ಪರಿಚಯಸ್ಥರು ಎಂದು ಹೇಳುತ್ತಾರೆ. ನಿಪಿಃ7 ರ ಪ್ರಕಾರ ದಿಃ11.07.2022 ರಂದು ನನ್ನ ಖಾತೆಯಿಂದ ರೂ. 4 ಲಕ್ಷ ಹಣ ಹಳ್ಳಿ ಶಂಕುಂತಲಾ ಫಕ್ಕೀರಪ್ಪ ಇವರ ಖಾತೆಗೆ ವರ್ಗಾವಣೆಯಾಗಿದೆ ಎಂದರೆ ಸರಿ. ಶಕುಂತಲಾ ಚೆನ್ನಬಸಪ್ಪ ಹೊಂಬಳ ಅಂದರೆ ಪ್ರತಿವಾದಿಗೆ ಹಣ ವರ್ಗಾಯಿಸಿಲ್ಲ ಎಂದರೆ ಅವರ ಖಾತೆಯಲ್ಲಿ ಅವರ ತವರು ಮನೆಯ ಹೆಸರು ಹಳ್ಳಿ ಶಕುಂತಲಾ ಫಕ್ಕೀರಪ್ಪ ಎಂದು ಇದೆ ಎಂದು ಹೇಳುತ್ತಾರೆ. ನಿಪಿಃ 1 ರಲ್ಲಿ ಪ್ರತಿವಾದಿಯ ತವರು ಮನೆಯ ಹೆಸರು ಬರೆದಿಲ್ಲ ಎಂದು ದಾವಾ ಆಸ್ತಿಯ ಉತಾರೆಯಲ್ಲಿ ಹೆಸರು ಹೇಗೆ ಇರುವುದೋ ಹಾಗೆ ಅವರೇ ಹೆಸರು ಬರೆಯಿಸಿದ್ದಾರೆ ಎಂದು ಹೇಳುತ್ತಾರೆ. ಸಂಪೂರ್ಣ ಹಣ ನೀಡಿದ್ದರೂ ಏಕೆ ಖರೀದಿ ಹಾಕಿಕೊಂಡಿಲ್ಲ ಎಂಬ ಪ್ರಶ್ನೆಗೆ ಹಣವನ್ನು ಖಾತೆಗೆ ಹಾಕಿದ ನಂತರ ಖರೀದಿ ಹಾಕಿ ಕೊಡುತ್ತೇನೆ ಎಂದು ಪ್ರತಿವಾದಿ ಹೇಳಿ, ನಂತರ ಖರೀದಿ ಹಾಕಿ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಗೆ ಸಂಪೂರ್ಣ ಖರೀದಿ ಹಣ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಿವೃತ್ತಿಯ ನಂತರ ಲಕ್ಕುಂಡಿಯ ಸುತ್ತ ಮುತ್ತ ಜಮೀನು ಖರೀದಿಸುವ ಉದ್ದೇಶ ಹೊಂದಿದ್ದರು ಎಂದರೆ ಗೊತ್ತಿಲ್ಲ. ಜಮೀನು ಹುಡುಕಿ ಕೊಡಲು ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ನಾನು ಕುಕನೂರು ತಾಲೂಕು ತಳಬಾಳದಲ್ಲಿ ಒಂದು ಜಮೀನು ಮಾರುವುದಿದೆ ಎಂದು ನಾನು ಪ್ರತಿವಾದಿಗೆ ಹೇಳಿದ್ದೆ ಎಂದರೆ ಸರಿಯಲ್ಲ. ಸದರಿ ಜಮೀನು ಮಾತುಕತೆಗೆ ನಾನೇ ಮುಂದಾಳತ್ವ ವಹಿಸಿದ್ದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು

ಪ್ರತಿವಾದಿಯಿಂದ ಖಾಲಿ ಚಾಪಾ ಕಾಗದಕ್ಕೆ ಸಹಿ ಪಡೆದು ಖೊಟ್ಟಿ ಖರೀದಿ ವಚನ ಪತ್ರ ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಖರೀದಿಗಾಗಿ ಹಣ ಕಡಿಮೆ ಬಿದ್ದಿದ್ದರಿಂದ ಪ್ರತಿವಾದಿ ನನ್ನಿಂದ ರೂ. 5 ಲಕ್ಷ 50 ಸಾವಿರ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಕೈಗಡ ಸಾಲ ಕೊಟ್ಟಿದ್ದನ್ನು ತೋರಿಸಿ ಮತ್ತು ಪ್ರತಿವಾದಿಗೆ ಸರಿಯಾಗಿ ಕಣ್ಣು ಕಾಣಿಸದೆ ಇರುವುದನ್ನು ದುರುಪಯೋಗಪಡಿಸಿಕೊಂಡು, ಅವರ ಸಹಿ ಪಡೆದುಕೊಂಡು ನಿಪಿಃ1 ನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯ ಉತ್ತರಕ್ಕೆ ಇರುವ ಕಾಳಪ್ಪ ವೀರಭದ್ರಪ್ಪ ಇವರ ಮನೆ ರೂ.29 ಲಕ್ಷಗಳಿಗೆ ಮಾರಾಟವಾಗಿದೆ ಎಂದರೆ ಗೊತ್ತಿಲ್ಲ. ಈಗ ಲಕ್ಕುಂಡಿಯಲ್ಲಿ 30X40 ಅಡಿ ಸೈಟಿಗೆ ರೂ. 10 ಲಕ್ಷ ಬೆಲೆ ಇದೆ ಎಂದರೆ ಕರಾರು ಪತ್ರ ಆಗುವಾಗ ದಾವಾ ಆಸ್ತಿಗೆ ಎಷ್ಟು ಬೆಲೆ ಇತ್ತು ಅಷ್ಟಕ್ಕೆ ಕರಾರು ಪತ್ರ ಆಗಿದೆ ಎಂದು ಹೇಳುತ್ತಾರೆ. ಪ್ರತಿವಾದಿಯ ಮಗಳು ಸರ್ಕಾರಿ ಶಾಲಾ ಶಿಕ್ಷಕಿಯಾಗಿದ್ದಾಳೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಮಗ ಸಾಫ್ಟವೇರ ಇಂಜಿಯರ್ ಆಗಿದ್ದಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗೆ ಯಾವುದೇ ಪ್ರಾಂಪಚಿಕ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡಿ ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ಕರಾರು ಪತ್ರ ಹಾಗೂ ಇತರ ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಗದಗ.